Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 92/2020

ಪ್ರಾ.ಸಾ. 1 ಚಾ.ಸಾ. 1

| | | |
|---|---|---|
| ಹೆಸರು | : | ಮಲ್ಲಪ್ಪ |
| ತಂದೆಯ ಹೆಸರು | : | ಮಲ್ಲಪ್ಪ ಗುಡ್ಡೆರ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಕೂಲಿ |
| ವಾಸ | : | ಮೈಲಾಪೂರ |

ಪ್ರಮಾಣ ವಚನ ಭೋಧಿಸಿದ ದಿನಾಂಕ: 08-07-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ಚಾಸಾ-4 ನನ್ನ ಪತ್ನಿ. ನಮ್ಮದು ಹೊಲೆಯ ಪರಿಶಿಷ್ಟ ಜಾತಿ ಇರುತ್ತದೆ. ಈ ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ಆರೋಪಿ- 1, 2 ಮತ್ತು 4 ರಿಂದ 8 ಮತ್ತು ಮೃತ ಆರೋಪಿ ಗೊತ್ತು ಅವರು ಲಿಂಗಾಯತ ಜಾತಿಗೆ ಸೇರಿದವರು.

2. ನಮ್ಮ ಮತ್ತು ಆರೋಪಿತರ ಮನೆ ಎದುರು ಬದರು ಇರುತ್ತದೆ. ನಾವು ಪ್ರತಿನಿತ್ಯ ಆರೋಪಿತರ ಮನೆಯ ಮುಂಭಾಗದಲ್ಲಿ ನಡೆದುಕೊಂಡು ಊರ ಒಳಗೆ ಹೋಗಬೇಕು. ನಾವು ಅವರ ಮನೆಯ ಮುಂದೆ ಹೋಗುವಾಗ ಆಗಾಗ ನಾವು ಹೊಲಯ ಜಾತಿಯವರು ಅವರ ಮನೆಯ ಮುಂದೆ ಹೋಗಬಾರದು ಎಂದು ತಕರಾರು ಮಾಡುತ್ತಿದ್ದರು. ದಾರಿಯಲ್ಲಿ ಕಲ್ಲು ಅಡ್ಡ ಹಾಕುತ್ತಿದ್ದರು. ಕಲ್ಲುಗಳನ್ನು ಅಡ್ಡ ಇಟ್ಟರೆ ಊರ ಒಳಗಡೆ ಹೇಗೆ ಓಡಾಡಬೇಕು ಎಂದು ಕೇಳುತಿದ್ದೆವು.

3. ದಿ: 30.08.2020 ರಂದು ಬೆ: 8.00 ಗಂಟೆಗೆ ಮೈಲಾಪೂರ ಗ್ರಾಮದ ನಮ್ಮ ಮನೆಯ ಮುಂಭಾಗದಲ್ಲಿ ಓಡಾಡುವ ದಾರಿಯಲ್ಲಿ ಆರೋಪಿತರು ಕಲ್ಲು ಹಾಕಿದ್ದು, ನಾವು ಅವರಿಗೆ ದಾರಿಯಲ್ಲಿ ಕಲ್ಲುಗಳನ್ನು ಹಾಕಿದರೆ ಹೇಗೆ ಓಡಾಡುವುದು ಎಂದು ಕೇಳಿದೆವು. ಅಕ್ಕೆ ಒಟ್ಟು ಎಂಟು ಜನ ಆರೋಪಿತರು ನಮ್ಮ ಮೈಮೇಲೆ ಬಂದು ನಾವು ಹೊಲೆಯ ಜಾತಿಯವರು ಎಂದು ನಿಂದಿಸಿದರು. 5 ನೇ ಆರೋಪಿ 1 ನೇ ಆರೋಪಿ ಮೃತುಂಜಯಪ್ಪನ ಬಿದುರು ಬಡಿಗೆ ತೆಗೆದು ಕೊಂಡು ನನಗೆ ಬೆನ್ನಿಗೆ ಹೊಡೆದು ಎಲ್ಲಾ ಆರೋಪಿತರು ಕೈ ಮುಷ್ಟಿಯಿಂದ ಬೆನ್ನಿಗೆ ಹೊಟ್ಟೆಗೆ ಹೊಡೆದರು. ನಂತರ ನನ್ನ ಪತ್ನಿ ಚಾಸಾ-4 ಮಹಾಲಿಂಗಮ್ಮ ಜಗಳ ಬಿಡಿಸಲು ಬಂದಾಗ ಆರೋಪಿ-5 ರಿಂದ 8 ಆಕೆಯ ಕುಪ್ಪಸ ಹಿಡಿದು ಎಳೆದಾಡಿ, ನೆಲಕ್ಕೆ ಕೆಡವಿ ಕಾಲಿನಲ್ಲಿ ಒದ್ದಿರುತ್ತಾರೆ. ನಂತರ ಜಗಳವನ್ನು ಚಾಸಾ-6 ಮತ್ತು 7 ಬಿಡಿಸಿರುತ್ತಾರೆ.

4. ನಂತರ ಆರೋಪಿತರುನಾವುದಾರಿ ಕೊಡುವುದಿಲ್ಲ ಏನು ಮಡಿಕೊಡಿಕೊಳ್ಳುತ್ತೀರಿ ಮಾಡಿಕೊಳ್ಳಿ ಅಂತಾ ಜೀವದ ಬೆದರಿಕೆ ಹಾಕಿದ್ದಾರೆ. ನಾವು ಚಲವಾದಿ ಜಾತಿಗೆ ಸೇರಿದವರು ಎಂದು ಆರೋಪಿತರು ನಮ್ಮ

ನೆರೆಹೊರೆಯುವರಾಗಿದ್ದರಿಂದ ಗೊತ್ತಿದೆ. ಆರೋಪಿತರು ನಮಗೆ ಜಾತಿ ನಿಂದನೆ ಮಾಡಿದ್ದರಿಂದ ನನ್ನ ಮನಸ್ಸಿಗೆ ನೋವಾಗಿದೆ. ಆರೋಪಿತರು ನಮಗೆ ಜೀವದ ಬೆದರಿಕೆ ಹಾಕಿದ್ದರಿಂದ ನಮಗೆ ಏನಾದರು ತೊಂದರೆ ಮಾಡುತ್ತಾರೆ ಅಂತಾ ಅನಿತಿಸಿತು. ನಮಗೆ ಹೊಡೆ ಬಡೆ ಮಾಡಿದ ಆರೊಪಿ-1,2,4 ರಿಂದ 8 ಪ್ರಸ್ತುತ ನ್ಯಾಯಾಲಯದ ಮುಂದೆ ಇದ್ದಾರೆ. ಆರೋಪಿ-3 ಮಲಕಜಪ್ಪ ಮೃತಪಟ್ಟಿರುತ್ತಾರೆ.

5. ಘಟನಯ ನಂತರ ನಾವು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ನಂತರ ಮನೆಯಲ್ಲಿ ವಿಚಾರಿಸಿ ಗ್ರಾಮೀಣ ಪೋ.ಠಾಣೆಗೆ ಹೋಗಿ ದೂರುಕೊಟ್ಟೆವು. ಸಾಕ್ಷಿಗೆ ಕಡತದಲ್ಲಿನ ದೂರನ್ನು ತೋರಿಸಿ ಸಹಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು ಸಹಿಯನ್ನು ನಿಪಿ-1(ಎ)ಅಂತಾ ಗುರುತುಮಾಡಲಾಯಿತು.

6. ನಾನು ದೂರು ನೀಡಿದ ನಂತರ ಪೋಲೀತರು ಘಟನಾ ಸ್ಥಳಕ್ಕೆ ಬಂದು ಚಾಸಾ- 2 ಮತ್ತು 3 ಮಲ್ಲ ಮತ್ತು ಮಹಾದೇವಪ್ಪ ಇವರ ಸಮಕ್ಷಮ ನಾನು ಸ್ಥಳ ತೋರಿಸಿದಂತೆ ಪೊಲಿಸೀರು ಪಂಚನಾಮೆ ಮಾಡಿ ಒಂದು ಬಿದಿರು ಬಡಿಗೆ ಜಪ್ತಿಪಡಿಸಿಕೊಂಡು ಫೋಟೋ ತೆಗೆದಿದ್ದಾರೆ. ಸಾಕ್ಷಿಗೆ ಕಡತದಲ್ಲಿನ ಸ್ಥಳ ಪಂಚನಾಮೆ ತೋರಿಸಿ ಸಹಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು ಸಹಿಯನ್ನು ನಿಪಿ-2(ಎ)ಅಂತಾ ಗುರುತುಮಾಡಲಾಯಿತು. ಸಾಕ್ಷಿಗೆ ಕಡತದಲ್ಲಿನ ಒಂದು ಭಾವ ಚಿತ್ರ ತೋರಿಸಿ ಅದರಲ್ಲಿ ತಾನು ಇರುವುದಾಗಿ ಗುರುತಿಸಿದ್ದು, ಅದನ್ನು ನಿಪಿ-3 ಎಂದುಗುರುತಿಸಲಾಯಿತು. ಸಾಕ್ಷಿಗೆ ಕಡತದಲ್ಲಿನ ಕಚ್ಚಾ ನಕಾಶೆ ತೋರಿಸಿ ಸಹಿ ಗುರುತಿಸಿದ್ದು, ಅದನ್ನು ನಿಪಿ-4 ಎಂದು ಸಹಿಯನ್ನು ನಿಪಿ-4(ಎ)ಅಂತಾ ಗುರುತುಮಾಡಲಾಯಿತು. ನ್ಯಾಯಾಲಯದ ಮುಂದೆ ತೆರೆದ ಸ್ಥಿತಿಯಲ್ಲಿದ್ದ ಒಂದು ಬಿದಿರು ಬಡಿಗೆ ಮತ್ತು ಕುಪ್ಪಸ ತೋರಿಸಿ ಸಾಕ್ಷಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಮುಮಾ-1 ಮತ್ತು 2 ಎಂದು ಗುರುತಿಸಲಾಯಿತು. ಮುಮಾ-2 ತನ್ನ ಪತ್ನಿಯದು ಎಂದು ಹೇಳುತ್ತಾರೆ.

7. ಆ ನಂತರ ನನ್ನನ್ನು ಪೋಲೀಸರು ಆರಕ್ಷಕ ಉಪಅಧೀಕ್ಷರ ಕಚೇರಿಗೆ ಕರೆಯಿಸಿ ನನ್ನ ಹೇಳಿಕೆ ಪಡೆದುಕೊಂಡರು.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಸಿಎಸ್‌ಎಂ ವಕೀಲರಿಂದ</u>

8. ನಮ್ಮ ಮನೆ ಮತ್ತು ಆರೋಪಿತರ ಮನೆ ಹಿರಿಯರುಕಟ್ಟಿದ್ದ ಮನೆ ಇರುತ್ತದೆ ಎಂದರೆ ಸರಿ. ನಮ್ಮ ಹಿರಿಯರು ಮತ್ತು ಆರೋಪಿತರ ಹಿರಿಯರು ಸರಿದ ಮನೆಗಳಲ್ಲಿ ವಾಸ ಇದ್ದ ಕಾಲದಲ್ಲಿ ಯಾವುದೇ ವ್ಯಾಜ್ಯ ಇರಲಿಲ್ಲ ಎಂದರೆ ಆರೋಪಿತರು ತಮ್ಮ ಮನೆಯಲ್ಲಿ ವಾಸ ಇರಲಿಲ್ಲ ಎಂದು ನುಡಿಯತ್ತಾರೆ. ನಮ್ಮ ಮನೆಯ ಜಾಗೆ 30★ 40 ಇರಬಹುದು.ಸ

9. ನಮ್ಮ ಮನೆಯ ರಸ್ತೆ ಮುಖ್ಯ ರಸ್ತೆಗೆ ಬರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಒಳಗಡೆ ರಸ್ತೆಗೆ ಬರುತ್ತದೆ ಎಂದು ಹೇಳುತ್ತಾರೆ . ಆರೋಪಿತರು ನಾವು ಓಡಾಡುವ ರಸ್ತೆಯಲ್ಲಿ ಕಲ್ಲುಗಳನ್ನು ಇಟ್ಟಿದ್ದಾರೆಂದು ಪಂಚಾಯತಿಗೆ ತಕರಾರು ಮಾಡಿರುತ್ತೇವೆ. ಆರೋಪಿ ತರು ನಮ್ಮ ಜಾಗ ಒತ್ತುವರಿ ಮಾಡಿರುತ್ತಾರೆಂದು ಯಾವುದೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿಲ್ಲ. ನಮ್ಮ ಮನೆಯ ಮತ್ತು ರಸ್ತೆಯ ಅನುಮೋದಿತ ನಕಾಶೆಯನ್ನು ಪಂಚಾಯತಿಯಿಮಿಂದ ಪಡೆದು ಹಾಜರುಪಡಿಸಿಲ್ಲ ಎಂದರೆ ಸರಿ. ಆರೋಪಿತರು ಅವರ ಮನೆಯ ಹಿಂಭಾಗಕ್ಕೆ ಹಸುಗಳನ್ನು ಕಟ್ಟುತ್ತಿದ್ದರು ಎಂದರೆ ಸರಿ. ಆರೋಪಿತರ ಕುಟುಂಬ ನಂತರ ದೊಡ್ಡದಾಗಿದ್ದು ಹಿಂಭಾಗದಲ್ಲಿ ಶೆಡ್ ಹಾಕಿಕೊಂಡು ಅದರಲ್ಲಿ ವಾಸಿಸುತ್ತಿದ್ದರು ಎಂದರೆ ಸರಿ. ಸದರಿ ಜಾಗವನ್ನು ಒತ್ತು ಮಾಡಬೇಕೆಂಬ ಕಾರಣದಿಂದ ನಾವು ಆರೋಪಿತರ ವಿರುದ್ಧ ಈ ಸುಳ್ಳು ಪ್ರಕರಣ

ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ಪ್ರತಿ ದಿನ ಅವರ ಅವರ ಕೆಲಸದಲ್ಲಿ ತೊಡಗಿರುತ್ತಾರೆ ಎಂದರೆ ಅವರೇ ಕಲ್ಲುಗಳನ್ನು ರಸ್ತೆಗೆ ಹಾಕಿದ್ದಾರೆ ಎಂದು ನುಡಿಯುತ್ತಿರೆ.

10. ಈ ಪ್ರಕರಣದ ಘಟನೆ ಸುಮಾರು ಅರ್ದ ತಾಸು ನಡೆಯಿತು. ಚಾಸಾ-6 ಮತ್ತು 7 ರವರನ್ನು ಹೊರತುಪಡಿಸಿ ಊರಿನ ಜನ ಯಾರು ಘಟನಾ ಸ್ಥಳಕ್ಕೆ ಬರಲಿಲ್ಲ . ನನಗೆ 5 ನೇ ಆರೋಪಿ ಪ್ರೇಮ ಬಡಿಗೆಯಿಂದ ಹೊಡೆದಾಗ ರಕ್ತ ಗಾಯವಾಯಿತು. ನನ್ನ ಬಟ್ಟೆ ರಕ್ತದ ಕಲೆ ಆಗಿತ್ತು. ನಾನು ಧರಿದ್ದ ಅಂಗಿಯನ್ನು ಪೋಲೀಸರಿಗೆ ನೀಡಿದ್ದೇನೆ.

11. ನಮ್ಮ ಊರಲ್ಲಿ ಆಸ್ಪತ್ರ ಇದೆ ಎಂದರೆ ಸರಿ. ನಾವು ಸರ್ಕಾರಿ ಆಸ್ಪತ್ರೆಗೆ ಸುಮಾರು 9.30 ಗಂಟೆಗೆ ಹೋದೆವು. ಆಸ್ಪತ್ರೆಯಲ್ಲಿ ಸುಮಾರು 3 ಗಂಟೆವರೆಗೆ ಇದ್ದೆವು. ನಂತರ ನಾವು 5 ಗಂಟೆಗೆ ಪೋಲೀಸ ಠಾಣೆಗೆ ಹೋದೆವು. ನಾನು ಮತ್ತು ನನ್ನ ಚಾಸಾ-4 ನನ್ನ ಪತ್ನಿ ಠಾಣೆಗೆ ಹೋದೆವು. ಠಾಣೆಯಲ್ಲಿ ಸುಮಾರು 1 ತಾಸು ಇದ್ದೆವು. ನಾವು ಹೇಳಿದಂತೆ ಠಾಣೆಯಲ್ಲಿ ಬರೆದುಕೊಂಡರು.

12. ನಾವು ಆರೋಪಿತರ ಮನೆಯ ಮುಂದೆ ಮೊದಲು ತಿರುಗಾಡುವಾಗ ಆರೋಪಿತರು ಬೈಯುತ್ತಿದ್ದರು ಎಂಬ ದೂರಿನಲ್ಲಿ ಹೇಳಿಲ್ಲಾ ಎಂದರೆ ಸರಿಯಲ್ಲ.

13. ಪ್ರಶ್ನಿತ ಘಟನೆಯ ದಿನದಂದು ಆರೋಪಿತರು ನಮಗೆ ಜಾತಿ ಹಿಡಿದು ನಿಂದಿಸುವುದಾಗಲಿ, ಹಲ್ಲೆ ಮಾಡುವುದಾಗಲಿ, ನನ್ನ ಪತ್ನಿ ಚಾಸಾ-4 ರವರ ಕುಪ್ಪಸ ಹಿಡಿದು ಎಳೆದು ಅವಮಾನ ಪಡಿಸುವುದಾಗಲಿ, ಜೀವ ಬೆದರಿಕೆ ಹಾಕುವುದಾಗಲಿ ಮಾಡಿಲ್ಲಾ ಎಂದರೆ ಸರಿಯಲ್ಲ.

14. ಆ ದಿನ ಸಂಜೆ 7.30 ಕ್ಕೆ ಮನೆಗೆ ಹಿಂದಿರುಗಿರುತ್ತೇವೆ. ನಾವು ಊರಿಗೆ ಹಿಂದಿರುಗಿದ ನಂತರ ಮಾರನೆ ದಿನ ಬೆಃ 9.00 ಗಂಟೆಗೆ ಬಂದಿರುತ್ತಾರೆ. ಚಾಸಾ-2 ಮತ್ತು 3 ಇವರನ್ನು ನಾನೇ ಕರೆಯಿಸಿರುತ್ತೇನೆ. ಪೋಲೀಸರು ನಮ್ಮ ಊರಿಗೆ ಬಂದ ನಂತರ ಒಂದು ತಾಸು ಇದ್ದರು.

15. ನಮ್ಮ ಮನೆಯ ಮುಂದೆ ನಿಪಿ-3 ರಲ್ಲಿ ಕಂಡು ಬರುವಂತೆ ರಸ್ತೆ ಜಾಗ ಇದೆ ಎಂದರೆ ಸರಿ. ಯಾವುದೇ ಘಟನೆ ನಡೆಯದಿದ್ದರೂ ಆರೋಪಿತರ ಜಾಗವನ್ನು ಒತ್ತುವರಿ ಮಾಡಿಕೊಳ್ಳು ಉದ್ದೇಶದಿಂದ ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿತರ ಹಿರಿಯರ ಕಾಲದಲ್ಲಿ ಯಾವುದೇ ವಾಜ್ಯ ಇರಲಿಲ್ಲ ಎಂದರೆ ಪ್ರಸ್ತುತ ಆರೋಪಿತರು ಖಾಲಿ ಜಾಗದ ಕಡೆಗೆ ಬಂದಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ.

16. ಆರೋಪಿತರು ತಾವು ಹಸುಗಳನ್ನು ಕಟ್ಟುತಿದ್ದ ಜಾಗದಲ್ಲಿ ವಾಸಕ್ಕೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದರೆ ಸಾಕ್ಷಿ ನಮಗೆ ತಿರುಗಾಡಲು ಜಾಗ ಇಲ್ಲಾ ಎಂದು ನುಡಿಯುತ್ತಾರೆ. ನಮ್ಮ ಮನೆಯ ಮುಂದೆ ತಿರುಗಾಡಲು ಸಾಕ್ಷಷ್ಟು ಜಾಗ ಇದೆ ಎಂದರೆ ಸರಿಯಲ್ಲ. ನಾವು ಆರೋಪಿತರ ಜಾಗ ಕಸಿದುಕೊಳ್ಳು ಉದ್ದೇಶದಿಂದ ಸೃಷ್ಟಿತ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

17. ಪಂಚನಾಮೆ ಮಾಡಿದಾ ನಂತರ ಮದ್ಯಾಹ್ನ ಸುಮಾರು 12.00 ಗಂಟೆಗೆ ನಾನು ಡಿವೈಸಪಿ ಕಚೇರಿಗೆ ಹೋಗಿದ್ದೆ. ಕಚೇರಿಯಲ್ಲಿ ಮತ್ತೆ ಘಟನೆ ಬಗ್ಗೆ ಕೇಳಿದ್ದಾರೆ. ಕಚೇರಿಗೆ ನಾನು ಮತ್ತು ಚಾಸಾ-4 ನನ್ನ ಪತ್ನಿ ಹೋಗಿದ್ದೆವು. ನಾನು ಮತ್ತು ನನ್ನ ಪತ್ನಿ ಆ ದಿನ ಡಿವೈಎಸ್ ಪಿ ಕಚೇರಿಯಲ್ಲಿ ಹೇಳಿಕೆ ನೀಡಿರುತ್ತೆವೆಂದು ಸುಳ್ಳು ಹೇಳುತಿದ್ದೇನೆದರೆ ಸರಿಯಲ್ಲ. ನನಗೆ ಪ್ರಶ್ನಿತ ಘಟನೆಯಲ್ಲಿ ಯಾವುದೇ ಗಾಯಗಳು ಆಗಿಲ್ಲದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನಂದರೆ ಸರಿಯಲ್ಲ. ಮುಮಾ- 2 ನನ್ನ ಪತ್ನಿಗೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ. ಮುಮಾ-1 ಬಡಿಗೆ ಸಮಾನ್ಯವಾಗಿ ಎಲ್ಲ ಕಡೆ ಸಿಗುವುದುಇದ್ದು ಅದನ್ನು 5 ನೇ ಆರೋಪಿ ನನ್ನ ಮೇಲೆ ಹಲ್ಲೆ

ಮಾಡಲು ಬಳಕೆ ಮಾಡಿಲ್ಲಾ ಎಂದರೆ ಸರಿಯಲ್ಲ. ನಾನು ಘಟನೆ ದಿನ ಸಂಜೆ **5.00** ಗಂಟೆಗೆ ದೂರು ನೀಡಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.